# ಅಧಿವೇಶನಕ್ಕೆ ಇದೆ ಹಲವು ಸವಾಲು

## ಜಂಟಿ ಅಧಿವೇಶನದಲ್ಲಿ ನಾಳೆ ರಾಜ್ಯಪಾಲರ ಭಾಷಣ | ಏಳು ದಿನ ಕಲಾಪ

ಬೆಂಗಳೂರು: ರೈತರ ಪ್ರತಿಭಟನೆ, ಹುಣಸೋಡು ಜಿಲೆಟಿನ್ ಸ್ಫೋಟ, ಕೆಪಿಎಸ್‌ಸಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ, ಸಂಪುಟ ವಿಸ್ತರಣೆ ಹಾಗೂ ಖಾತೆಗಾಗಿ ಹಗ್ಗ ಜಗ್ಗಾಟದ ವಿದ್ಯಮಾನಗಳ ನಡುವೆಯೇ ಗುರುವಾರದಿಂದ ರಾಜ್ಯ ವಿಧಾನಮಂಡಲದ ಅಧಿವೇಶನ ಆರಂಭವಾಗಲಿದೆ. ಸರ್ಕಾರದ ಮೇಲೆ ಮುಗಿಬೀಳಲು ಪ್ರತಿಪಕ್ಷಗಳು ಸಜ್ಜಾಗುತ್ತಿದ್ದರೆ, ತಿರುಗೇಟು ನೀಡಲು ಆಡಳಿತಾರೂಢ ಬಿಜೆಪಿ ಕಾರ್ಯತಂತ್ರ ರೂಪಿಸುತ್ತಿದೆ.



ಏಳು ದಿನ ನಡೆಯಲಿರುವ ಅಧಿವೇಶನದಲ್ಲಿ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿರುವ ಗೋಹತ್ಯೆ ನಿಷೇಧ ವಿಧೇಯಕ ಮಂಡಿಸಿ ಅನುಮೋದನೆ ಪಡೆಯಬೇಕಿದೆ. ಜತೆಗೆ ಲವ್ ಜಿಹಾದ್ ಕಾನೂನು ಪ್ರಸ್ತಾಪದ ಸಾಧ್ಯತೆಯೂ ಇದೆ. ಹೀಗಾಗಿ, ವರ್ಷದ ಮೊದಲ ಅಧಿವೇಶನ ಆಡಳಿತ-ಪ್ರತಿಪಕ್ಷಗಳ ನಡುವಿನ ವಾಕ್ಸಮರ - ಕೋಲಾಹಲಕ್ಕೆ ಸಾಕ್ಷಿಯಾಗಬಹುದು.

ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ವಿರೋಧಿಸಿ ಕಾಂಗ್ರೆಸ್ ರಾಜಭವನ ಮುತ್ತಿಗೆ ಸಹ ನಡೆಸಿದ್ದರಿಂದ ಸದನದಲ್ಲೂ ಆ ವಿಚಾರ ಪ್ರಸ್ತಾಪಿಸುವ ಸಾಧ್ಯತೆಯಿದೆ.

▶ 8ನೇ ಪುಟಕ್ಕೆ

### 60 ದಿನ ನಡೆಯುತ್ತಾ?

ವರ್ಷಕ್ಕೆ 60 ದಿನ ಅಧಿವೇಶನ ನಡೆಸಬೇಕು ಎಂದು ತೀರ್ಮಾನ ಮಾಡಲಾಗಿದ್ದರೂ 2002 ರಿಂದ ಇದುವರೆಗೂ ಅಷ್ಟು ದಿನ ನಡೆದೇ ಇಲ್ಲ, 2020 ರಲ್ಲಿ 31 ದಿನ ಮಾತ್ರ ಅಧಿವೇಶನ ನಡೆದಿದೆ. ಕೊರೊನಾ ಮತ್ತಿತರ ಕಾರಣ ನೀಡಿದರೂ 2019 ರಲ್ಲೂ 18 ದಿನವೇ ನಡೆದಿರುವುದು. ಹೀಗಾಗಿ, ಈ ವರ್ಷವಾದರೂ 60 ದಿನ ಅಧಿವೇಶನ ನಡೆಯುತ್ತಾ? ಎರಡು ವರ್ಷಗಳಿಂದ ಪ್ರವಾಹ, ಕೊರೊನಾದಿಂದ ಬೆಳಗಾವಿ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆದಿಲ್ಲ.

# ಅಧಿವೇಶನಕ್ಕೆ ಇದೆ ಹಲವು ಸವಾಲು

1ನೇ ಪುಟದಿಂದ ▶ ಜತೆಗೆ, ಹುಣಸೋಡು ಜಿಲೆಟಿನ್ ಸ್ಫೋಟ, ಕೆಪಿಎಸ್‌ಸಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ, ಸಂಪುಟ ವಿಸ್ತರಣೆ ನಂತರ ಬಿಜೆಪಿಯಲ್ಲಿ ಎದ್ದಿರುವ ಅಸಮಾಧಾನ ಪ್ರಸ್ತಾಪಿಸಿ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಅಧಿವೇಶನದ ಮೊದಲ ದಿನ ನಡೆಯಲಿರುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಕುರಿತು ರಣತಂತ್ರ ರೂಪಿಸುವ ಸಾಧ್ಯತೆಯಿದೆ. ಮತ್ತೊಂದೆಡೆ ಬಿಜೆಪಿ ಸಹ ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆ ಅಸಮಾಧಾನ ಬಹುತೇಕ ಮಟ್ಟಿಗೆ ಶಮನ ಮಾಡಿಕೊಂಡಿದ್ದು, ಅತೃಪ್ತರನ್ನು ಸಮಾಧಾನಪಡಿಸಿ ಅಧಿವೇಶನದಲ್ಲಿ ಅದು ಪರಿಣಾಮ ಬೀರದಂತೆ ಎಚ್ಚರಿಕೆ ವಹಿಸಿದೆ. ಅದಕ್ಕಾಗಿ ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ಸೇರಿದಂತೆ ಹಿರಿಯ ಸಚಿವರು ಅಸಮಾಧಾನಿತರನ್ನು ಸಂಪರ್ಕಿಸಿ ಮನವೊಲಿಕೆಯಲ್ಲಿ ತೊಡಗಿದ್ದಾರೆ.

**ಚುನಾವಣೆ:** ಇದರ ನಡುವೆ ವಿಧಾನಪರಿಷತ್‌ನ ಉಪ ಸಭಾಪತಿ ಚುನಾವಣೆಯೂ ನಿಗದಿಯಾಗಿದೆ. ಮತ್ತೊಂದೆಡೆ ಆತ್ಮಹತ್ಯೆ ಮಾಡಿಕೊಂಡ ಉಪ ಸಭಾಪತಿ ಧರ್ಮೇಗೌಡರ ಬೇಸರಕ್ಕೆ ಕಾರಣವಾಗಿತ್ತು ಎಂದು ಹೇಳಲಾದ ವಿಧಾನಪರಿಷತ್‌ನಲ್ಲಿ ನಡೆದ ಕಹಿ ವಿದ್ಯಮಾನಗಳ ಕುರಿತು ಸದನ ಸಮಿತಿ ವರದಿ ಸಹ ಸಲ್ಲಿಸಿದೆ. ವರದಿ ಮಂಡನೆಯಾದರೆ ಪರಿಷತ್‌ನಲ್ಲಿ ಸಂಘರ್ಷದ ವಾತಾವರಣ ನಿರ್ಮಾಣವಾಗಬಹುದು. ಉಪ ಸಭಾಪತಿ ಚುನಾವಣೆ ನಂತರ ಸಭಾಪತಿ ಪದಚ್ಯುತಿ ಪ್ರಸ್ತಾವವೂ ಮುನ್ನೆಲೆಗೆ ಬರಬಹುದು.

ಜ.28 ರಂದು ಮೊದಲ ದಿನ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದು ನಂತರ ಫೆ.5 ರವರೆಗೂ ಕಲಾಪ ನಡೆಯಲಿದೆ. ಅಧಿವೇಶನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಿಗದಿಯಾಗಿದ್ದು, ಜೆಡಿಎಸ್ ಸಹ ಗುರುವಾರ ಅಥವಾ ಶುಕ್ರವಾರ ಶಾಸಕಾಂಗ ಪಕ್ಷ ಸಭೆ ನಡೆಸುವ ಸಾಧ್ಯತೆಯಿದೆ. ಬಿಜೆಪಿ ಇನ್ನೂ ಶಾಸಕಾಂಗ ಪಕ್ಷದ ಸಭೆ ಕರೆದಿಲ್ಲ. ಬಹುಶಃ ರಾಜ್ಯಪಾಲರ ಭಾಷಣದ ನಂತರ ಸಭೆ ನಿಗದಿಯಾಗಬಹುದು ಎಂದು ಹೇಳಲಾಗಿದೆ. ಆದರೆ, ಸಭಾಪತಿ-ಉಪ ಸಭಾಪತಿ ಚುನಾವಣೆ ವಿಚಾರವಾಗಿ ಬುಧವಾರ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಬಿಜೆಪಿ ನಾಯಕರ ಸಭೆ ನಡೆಯಲಿದೆ.